**CW : 35**

PW : 18

ಹೆಚ್ಚುವರಿ  ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.3064/2019

ಸಾಕ್ಷಿದಾರರ ಹೆಸರು : ಶ್ರೀ  ದಯಾನಂದ

ತಂದೆಯ ಹೆಸರು : ಶ್ರೀ ಎಸ್ ಡಿ ರಾಮಣ್ಣ

ಪ್ರಾಯ : 49 ವರ್ಷ

ಉದ್ಯೋಗ ಪೋ ಮುಖ್ಯ ಪೇದೆ , ಉಪ್ಪಿನಂಗಡಿ ಪೋ ಠಾಣೆ

ವಾಸಸ್ಥಳ : ಸಾಲ್ಮರ, ಪುತ್ತೂರು.

ದಿನಾಂಕಃ**20.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ  ಮಾನ್ಯ  ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಮಾರ್ಚ್ 2017  ರಿಂದ  ಜುಲೈ 2024 ರ ವರೆಗೆ  ಪುತ್ತೂರು ಗ್ರಾಮಾಂತರ ಪೋ ಠಾಣೆಯಲ್ಲಿ  ಪೋ ಮುಖ್ಯಪೇದೆ ಎಂದು  ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ 17.08.2017ರಂದು ಎಎಸ್ ಐ ಅಬ್ದುಲ್ ಖಾದರ್ ರವರು ಇಲಾಖಾ ಜೀಪಿನಲ್ಲಿ ಚಾಸಾ-33 ರಿಂದ 37 , ಚಾಸಾ-39 ಮತ್ತು 40 ರವರ ಜೊತೆಗೆ ಬುಲೇರಿಕಟ್ಟೆಗೆ ರೌಂಡ್ಸ್ ಗೆ ತೆರಳಿ ವಾಪಾಸು ನನ್ನನ್ನು ಠಾಣೆಯಲ್ಲಿ ಇಳಿಸಿ ಆರ್ಯಾಪು ಕಡೆಗೆ ಹೋಗುವ ಸಮಯ ಆರೋಪಿಗಳು ಬಿಡಿ ಸಿಗರೇಟ್ ಸೇದಿಕೊಂಡು ಅನುಮಾನಾಸ್ಪದವಾಗಿ ಸೇದಿಕೊಂಡಿದ್ದು ಸದರಿಯವರನ್ನು ವಿಚಾರಿಸಿದಾಗ ಸದರಿಯವರು ತಾವು ಮನೆ ಕಳ್ಳತನ ಮಾಡಲು ಬಂದಿರುವುದಾಗಿ ತಿಳಿಸಿದಂತೆ ಸದರಿ ಆರೋಪಿಗಳನ್ನು ಪಿಎಸ್ಐ ಮತ್ತು ಸಿಬ್ಬಂದಿಗಳು ಸುತ್ತುವರಿದು ನಂತರ ಕರೆ ಮಾಡಿ ನನ್ನನ್ನು ಮತ್ತು ಚಾಸಾ-38 ರವರನ್ನು ಸ್ಥಳಕ್ಕೆ ಬರುವಂತೆ ತಿಳಿಸಿದ್ದು ಅದರಂತೆ ನಾವು ಸದ್ರಿ ಸ್ಥಳಕ್ಕೆ ಹೋಗಿ ಆರೋಪಿಗಳಾದ ಮಹಮ್ಮದ್ ಅಶ್ರಫ್ , ಮಹಮ್ಮದ್ ಜಾಫರ್, ಸಾದಿಕ್,  ಅನ್ವರ್ ಅಲಿ ,  ಮಹಮ್ಮದ್ ತೌಫಿಕ್,  ಕಪ್ಪು ರಫಿಕ್ ಎಂಬುವರನ್ನು ವಶಕ್ಕೆ ಪಡೆದುಕೊಂಡು ಠಾಣೆಗೆ ಬಂದಿರುತ್ತೇವೆ. ಠಾಣೆಯಲ್ಲಿ ಪಂಚರ ಸಮಕ್ಷಮ ಪಂಚರಾದ ಚಾಸಾ-8 ಮತ್ತು 9ರವರ ಸಮಕ್ಷಮ ಸದ್ರಿ ಆರೋಪಿಗಳ ವಶದಲ್ಲಿದ್ದ ಸ್ವತ್ತುಗಳನ್ನು ಸ್ವಾದೀನಪಡಿಸಿಕೊಂಡಿರುತ್ತೇನೆ.

ಮಹಜರ್ ಕಾಲಕ್ಕೆ 1ನೇ ಆರೋಪಿಯಿಂದ ಮೊಬೈಲ್‌ಗಳು, 500 ಮುಖ ಬೆಲೆಯ, 100 ಮುಖ ಬೆಲೆಯ,  17 ನೋಟುಗಳು 50ರೂ ಮುಖ ಬೆಲೆಯ 4 ನೋಟುಗಳು ಒಟ್ಟು ರೂ 2900/- ಹಣ, ಕಪ್ಪು

ಬಿಳಿ ಹಸಿರುಬಣ್ಣದ ಮಾಸ್ಕ, ಮಂಕಿಕ್ಯಾಪ್, ಸ್ಕ್ರೂಡ್ರೈವರ್, ಗುರುತಿನ ಚೀಟಿ, ಮನ್ಸೂರ್ ಹೆಸರಲ್ಲಿರುವ ಡಿಎಲ್ ಮತ್ತು ಹಸಿರು ಬಣ್ಣದ ಮಾಸ್ಕ ಗಳನ್ನು ವಶಪಡಿಸಿಕೊಂಡಿರುತ್ತೇವೆ.

| 2ನೇ ಆರೋಪಿಯಿಂದ ಮೊಬೈಲ್, ಮಂಕಿಕ್ಯಾಪ್, ಸ್ಕ್ರೂಡ್ರೈವರ್, ಅಶ್ರಫ್ ಎನ್ನುವವರ ಹೆಸರಿನಲ್ಲಿರುವ ಗುರುತಿನ ಚೀಟಿ, ಡಿಎಲ್ ವಶಪಡಿಸಿಕೊಂಡಿರುತ್ತೇವೆ.

3ನೇ ಆರೋಪಿಯಿಂದ ಮೊಬೈಲ್, ರಿಕ್ಷಾ ನಂ.ಕೆಎ 21 ಬಿ 6193, ನೋಕಿಯಾ ಮೊಬೈಲ್‌ಗಳು, ಗರಗಸ, ಎರಡು ಬದಿ ಗರಗಸ ಇರುವ ಎಕ್ಸೊಬ್ಲೇಡ್-1, ಒಂದು ಬದಿ ಗರಗಸ ಇರುವ ಎಕ್ಸೊಬ್ಲೇಡ್-1, ಹಸಿರು ಬಣ್ಣದ ಹಿಡಿಯಿರುವ ಸ್ಕ್ರೂಡ್ರೈವರ್-2, ಹಸಿರು ನೀಲಿ ಬಣ್ಣದ ಕಬ್ಬಿಣದ ಲಿವರ್-1, ಕಬ್ಬಿಣದ ಸಲಾಕೆ-1 ಗಳನ್ನು ವಶಪಡಿಸಿಕೊಂಡಿರುತ್ತೇವೆ.

4ನೇ ಆರೋಪಿಯಿಂದ ಮೊಬೈಲ್-1, ಕಪ್ಪು ಬಣ್ಣದ ಟಾರ್ಚ ಲೈಟ್ ಗಳನ್ನು ವಶಪಡಿಸಿಕೊಂಡಿರುತ್ತೇವೆ.

5ನೇ ಆರೋಪಿಯಿಂದ ಮೊಬೈಲ್-1, ರಾಡೋ ವಾಚ್-1, 100 ರೂ ಮುಖಬೆಲೆಯ 500/- ರೂಪಾಯಿ ಗಳನ್ನು ವಶಪಡಿಸಿಕೊಂಡಿರುತ್ತೇವೆ.

6ನೇ ಆರೋಪಿಯಿಂದ ಮೊಬೈಲ್-1, ಎಮರ್ಜೆನ್ಸಿ ಲೈಟ್ ಗಳನ್ನು ವಶಪಡಿಸಿಕೊಂಡಿರುತ್ತೇವೆ.

ಪುತ್ತೂರು ಗ್ರಾಮಾಂತರ ಠಾಣೆಯ ಅಕ್ರ ಸಂಖ್ಯೆ 53/2017ರಲ್ಲಿ ಸ್ವತ್ತು ಸ್ವಾದೀನತಾ ಮಹಜರು ಮುಖೇನ ಬೆಳಿಗ್ಗೆ 07.15ಗಂಟೆಯಿಂದ 08.45ಗಂಟೆಯವರೆಗೆ ಮಹಜರನ್ನು ಬರೆದು ಆರೋಪಿ ಮತ್ತು ಸ್ವತ್ತುಗಳನ್ನು ವಶಕ್ಕೆ ಪಡೆದುಕೊಂಡಿರುತ್ತೇವೆ. ಸಾಕ್ಷಿಯು ಮಹಜರಿನಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಮಹಜರನ್ನು ಈಗಾಗಲೇ ನಿಪಿ-8 ಎಂದು ಗುರುತಿಸಿದ್ದು ಸಾಕ್ಷಿ ಸಹಿ ನಿಪಿ-8ಎ ಎಂದು ಗುರುತಿಸಲಾಯಿತು.

ಅ ಕ್ರ ಸಂಖ್ಯೆ 53/2017 ಪ್ರಕರಣದಲ್ಲಿ ಆಟೋರಿಕ್ಷಾಕ್ಕೆ ಸಂಬಂಧಿಸಿದಂತೆ ಸ್ವಾದೀನ ಪಡಿಸಿಕೊಂಡು ಮಹಜರು ಮಾಡಲಾಯಿತು. ಸದರಿ ಆಟೋರಿಕ್ಷಾ ನೋಡಿದರೆ ಗುರುತಿಸುತ್ತೇನೆ. ಉಳಿದ ಸ್ವತ್ತುಗಳನ್ನು ಸ್ವಾದೀನಪಡಿಸಿಕೊಂಡಿದ್ದು ಈ ಕೇಸಿಗೆ ಸಂಬಂಧವಿರುವುದಿಲ್ಲ ಆ ಸ್ವತ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಗುರುತಿನ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ 6 ನೇ ಆರೋಪಿಯನ್ನು ನೋಡಿ

ಗುರುತಿಸಿರುತ್ತಾರೆ. 3 ಮತ್ತು 4 ನೇ ಆರೋಪಿಗಳು ಈ ದಿನ ನ್ಯಾಯಾಲಯಕ್ಕೆ ಗೈರುಹಾಜರರಾಗಿದ್ದು ಅವರ ಗುರುತಿಸುವಿಕೆ ಬಗ್ಗೆ ಮಾನ್ಯ ಆರೋಪಿ ಪರ ವಕೀಲರು ತಮ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

ದಿ 19.08.2017ರಂದು ಆರೋಪಿ ಅನ್ವರ್ ಅಲಿ ಅವರ ಸ್ವಖುಷಿ ಹೇಳಿಕೆ ಆಧಾರದ ಮೇಲೆ ಸ್ವತ್ತುಗಳನ್ನು ಪುತ್ತೂರಿನ ಚಿನ್ನ ಬೆಳ್ಳಿ ಮಾರಾಟದ ಅಂಗಡಿಯಲ್ಲಿ ಕೊಟ್ಟಿರುತ್ತೇನೆ ಎಂದು ಹೇಳಿದ ಮೇರೆಗೆ ನಾನು ಚಾಸಾ-41 ಹಾಗೂ ಪಂಚರಾದ ಚಾಸಾ-14,15 ಮತ್ತು ಯೋಗೀಶ್ ಆಚಾರ್ಯ ಅವರೊಂದಿಗೆ ಆರೋಪಿತನೊಂದಿಗೆ ಕೋರ್ಟ್ ರಸ್ತೆಯಲ್ಲಿರುವ ಬಾವಾ ಜ್ಯುವೆಲ್ಲರ್ಸಿಗೆ ಕರೆದುಕೊಂಡು ಹೋಗಿ ಅಂಗಡಿ ತೋರಿಸಿದ ಮೇರೆಗೆ ಅಂಗಡಿಯ ಮಾಲೀಕರಾದ ಚಾಸಾ-12 ಇವರು ಆರೋಪಿ ಹೇಳಿದ ಹಾಗೆ 5 ಚಿನ್ನದ ಉಂಗುರ ಹಾಗೂ ಇತರೇ ತುಂಡು ತುಂಡು ಚಿನ್ನದ ಆಭರಣಗಳು ಇವುಗಳನ್ನು ಹಾಜರುಪಡಿಸಿದ ಮೇರೆಗೆ ಬೆ 10 ರಿಂದ 11.00 ರವರೆಗೆ ಸದರಿ ಸ್ಥಳದಲ್ಲಿ ಮಹಜರು ಮಾಡಿ ಅದಕ್ಕೆ ನನ್ನ ಸಹಿ ಪಡೆದುಕೊಳ್ಳಲಾಯಿತು. ಸದರಿ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-6 ಎಂದು ಗುರುತಿಸಲಾಯಿತು.

ನಂತರ ಮಹಮ್ಮದ್ ಸಾಧೀಕ್ ಆರೋಪಿ ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಜಲ್ಪಡ್ಪು ಎಂಬಲ್ಲಿರುವ ಭಾರತ್ ಪೆಟ್ರೋಲಿಯಂನಲ್ಲಿ ಇನೋವಾ ಕಾರಿಗೆ ಡೀಸೆಲ್ ಹಾಕಿಸಿ ಪಾಸ್ ಪೋರ್ಟನ್ನು ಅಡವಿಟ್ಟ ಬಗ್ಗೆ ಸ್ವಾದೀನಪಡಿಸಲು ಮೇಲೆ ತಿಳಿಸಿದ ಪಂಚರೊಂದಿಗೆ ನಾನು ಹಾಗೂ ಚಾಸಾ-41 ಸದರಿ ಸ್ಥಳಕ್ಕೆ ಆರೋಪಿತರೊಂದಿಗೆ ಹೋದಾಗ ಬಂಕ್ ಮಾಲೀಕರಾದ ಚಾಸಾ-13 ರವರು ಹಾಜರುಪಡಿಸಿದ ಮೇರೆಗೆ ಮದ್ಯಾಹ್ನ 1.00ರಿಂದ 2.00ರವರೆಗೆ ಮಹಜರು ಕ್ರಮ ಜರುಗಿಸಲಾಯಿತು. ಸಾಕ್ಷಿಯು ಸದರಿ ಮಹಜರನ್ನು ಹಾಗೂ ಅದರಲ್ಲಿರುವ ತನ್ನ ಸಹಿಯನ್ ನೋಡಿ ಗುರುತಿಸಿದ್ದು ಮಹಜರನ್ನುಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದೆ. ಸಾಕ್ಷೀಯ ಸಹಿಯನ್ನು ನಿಪಿ-9ಎಫ್ ಎಂದು ಗುರುತಿಸಲಾಯಿತು.

ನಾನು ತನಿಖಾಧಿಕಾರಿಯವರಿಗೆ ಮೇಲೆ ತಿಳಿಸಿದ ವಿಚಾರಗಳ ಸಂಬಂಧ ನನ್ನ ಹೇಳಿಕೆಯನ್ನು ನೀಡಿದ್ದೇನೆ. ಆರೋಪಿ ಮೊಹಮದ್ ಸಾದಿಕ್ ನನ್ನು ನೋಡಿದರೆ ಗುರುತಿಸುತ್ತೇನೆ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,

**CW : 35**

PW : 18

ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.